# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1431
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 30.12.2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳಿಗೆ ಕೆ.ಕೆ.ಆರ್.ಟಿ.ಸಿ ಸಾರಿಗೆ ಸೌಲಭ್ಯವಿದೆ; ಇದ್ದಲ್ಲಿ, ಮಕ್ಕಳ ಅನುಕೂಲ ಮತ್ತು ಅವರ ಸಮಯಕ್ಕೆ ತಕ್ಕಂತೆ ಕಾರ್ಯಚರಣೆ ಮಾಡುತ್ತಿದೆಯೇ; | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ 667 ಗ್ರಾಮಗಳಿದ್ದು, ಅವುಗಳ ಪೈಕಿ 664 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದ್ದು, ಉಳಿದ 03 ಗ್ರಾಮಗಳಿಗೆ ಬಸ್ ಸಂಚಾರಕ್ಕೆ ಯೋಗ್ಯ ರಸ್ತೆ ಸಂಪರ್ಕವಿಲ್ಲದ ಕಾರಣ ಬಸ್ ಸೇವೆ ಒದಗಿಸಿರುವುದಿಲ್ಲ.<br><br>ಬೀದರ್ ಜಿಲ್ಲೆಯಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಅನುಸೂಚಿ/ ಸುತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುವಾರು ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಿದ/ ಒದಗಿಸಬೇಕಾದ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ | ಬಸ್ಸು ಸೌಲಭ್ಯವಿರದ ಗ್ರಾಮಗಳೆಷ್ಟು; ಆ ಗ್ರಾಮಗಳಿಗೆ 70 ವರ್ಷಗಳಾದರೂ ಸಾರಿಗೆ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲೆಯಲ್ಲಿ ಒಟ್ಟು 03 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಬೇಕಾಗಿದ್ದು, ಸದರಿ ಗ್ರಾಮಗಳ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಸದರಿ 03 ಗ್ರಾಮಗಳ ರಸ್ತೆ ದುರಸ್ತಿಪಡಿಸುವಂತೆ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ ರವರಿಗೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೀದರ್ ರವರಿಗೆ ಪತ್ರ ಬರೆಯಲಾಗಿರುತ್ತದೆ. |
| ಇ | | ಬೀದರ್ ಜಿಲ್ಲೆಯಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಬೇಕಾದ ಒಟ್ಟು 03 ಗ್ರಾಮಗಳು ಈ ಕೆಳಕಂಡಂತಿದೆ: |



Generated from eOffice by B SREERAMULU, TD-MIN(BS), TRANSPORT MINISTER, Trans on 29/12/2022 06:30 PM

| | |
|---|---|
| ಬಂದಿದ್ದಲ್ಲಿ ಅಂತಹ ಗ್ರಾಮಗಳಾವುವು ಆ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಿ ಶಾಲಾ ಮಕ್ಕಳಿಗೆ ಅನುಕೂಲ ಮಾಡಿಕೊಡಲಾಗುವುದು ಯಾವಾಗ? | ಮುಕಬೇಡ 2 ನಾಗೂರ ಬಾಡ ಮತ್ತು 3 ವಿಕಲಾಸಪುರ<br><br>ಸದರಿ 03 ಗ್ರಾಮಗಳಿಗೆ ರಸ್ತೆ ದುರಸ್ತಿಪಡಿಸಿದ ಕೂಡಲೇ ಸಾರಿಗೆ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಪ್ರಸ್ತುತ ಸದರಿ 03 ಗ್ರಾಮಗಳಿಗೆ ಹತ್ತಿರವಿರುವ ಮುಖ್ಯರಸ್ತೆವರೆಗೆ ಅನುಬಂಧ-2ರಲ್ಲಿ ವಿವರಿಸಿರುವಂತೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ |

ಸಂಖ್ಯೆ: ಟಿಡಿ 355 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

# ಅನುಬಂಧ-1

**ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ಬಸ್ ಸೇವೆ ಒದಗಿಸಿದ/ಒದಗಿಸಬೇಕಾದ ಗ್ರಾಮಗಳ ವಿವರಗಳ ಪಟ್ಟಿ**

| ಕ್ರ. ಸಂ | ತಾಲ್ಲೂಕು | ಒಟ್ಟು ಗ್ರಾಮಗಳ ಸಂಖ್ಯೆ | ಬಸ್ ಸೇವೆ ಒದಗಿಸಿದ ಗ್ರಾಮಗಳ ಸಂಖ್ಯೆ | ಬಸ್ ಸೇವೆ ಒದಗಿಸಬೇಕಾದ ಗ್ರಾಮಗಳ ಸಂಖ್ಯೆ |
|---|---|---|---|---|
| 1 | ಬೀದರ | 151 | 151 | |
| 2 | ಹುಮನಾಬಾದ | 50 | 50 | |
| 3 | ಬಸವಕಲ್ಯಾಣ | 127 | 127 | |
| 4 | ಭಾಲ್ಕಿ | 134 | 133 | 1 |
| 5 | ಔರಾದ | 94 | 93 | 1 |
| 6 | ಕಮಲನಗರ | 54 | 53 | 1 |
| 7 | ಹುಲಸೂರ | 23 | 23 | |
| 8 | ಚಿಟಗುಪ್ಪ | 34 | 34 | |
| | ಒಟ್ಟು | 667 | 664 | 3 |

# ಅನುಬಂಧ-2

**ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ಬಸ್ ಸೇವೆ ಒದಗಿಸಬೇಕಾದ ಗ್ರಾಮಗಳ ವಿವರಗಳ ಪಟ್ಟಿ**

| ಕ್ರ. ಸಂ. | ತಾಲೂಕು | ಗ್ರಾಮದ ಹೆಸರು | ಸಾರಿಗೆ ಸೌಲಭ್ಯ ಒದಗಿಸದೇ ಇರಲು ಕಾರಣ | ಸಾರಿಗೆ ಗ್ರಾಮಕ್ಕೆ ಪ್ರಸ್ತುತ ಎಲ್ಲಿವರೆಗೆ ಬಸ್ ಸೇವೆ ಒದಗಿಸಲಾಗಿದೆ. |
|---|---|---|---|---|
| 1 | ಕಮಲನಗರ | ಮುತಖೇಡ | ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 2.5 ಕಿ.ಮೀ ಅಂತರದಲ್ಲಿರುತ್ತದೆ. ಪ್ರಸ್ತುತ ರಸ್ತೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. | ಔರಾದ-ದಾಬಕಾ-ಉದಗೀರ ಮಾರ್ಗವಾಗಿ ದಿನಾಲು 05 ಸರತಿಗಳ ಬಸ್ ಕಾರ್ಯಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |
| 2 | ಔರಾದ | ನಾಗೂರ (ಬಾಬಜಿ) | ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 01 ಕಿ.ಮೀ ಅಂತರದಲ್ಲಿದ್ದು, ಗ್ರಾಮದ ಒಳಗೆ ಬಸ್ ತಿರುಗಿಸಲು ಸ್ಥಳ ಇರುವುದಿಲ್ಲ. | ಔರಾದ-ಸಂತಪೂರ-ಸಂಗಮ ಕ್ರಾಸ್ ಮಾರ್ಗವಾಗಿ ಭಾಲ್ಕಿಗೆ ಪ್ರತಿದಿನ 20 ಸರತಿಗಳ ಕಾರ್ಯಾಚರಣೆಯಲ್ಲಿದ್ದು, ಸದರಿ 20 ಸರತಿಗಳು ನಾಗೂರ (ಬಾಬಜಿ) ಮುಖ್ಯ ರಸ್ತೆಗೆ ನಿಲುಗಡೆ ಮಾಡುತ್ತಿವೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |
| 3 | ಭಾಲ್ಕಿ | ಎಕಲಾಸಪೂರ | ಸದರಿ ಗ್ರಾಮವು ಆನಂದವಾಡಿ ಗ್ರಾಮದಿಂದ 5.00 ಕಿ.ಮೀ ಅಂತರದಲ್ಲಿರುತ್ತದೆ. ಭಾಲ್ಕಿ ಹಳೆ ಪಟ್ಟಣದಲ್ಲಿ ರಸ್ತೆ ತೀರ ಇಕ್ಕಟ್ಟಾಗಿರುವುದರಿಂದ ಬಸ್ ಕಾರ್ಯಾಚರಣೆಗೆ ಯೋಗ್ಯವಾಗಿರುವುದಿಲ್ಲ. | ಭಾಲ್ಕಿ ಪಟ್ಟಣದಲ್ಲಿ ರಸ್ತೆಯು ತೀರಾ ಇಕ್ಕಟ್ಟಾಗಿರುವುದರಿಂದ ಬಸ್ ಕಾರ್ಯಚರಣೆಗೆ ಯೋಗ್ಯವಾಗಿರುವುದಿಲ್ಲ. ಆನಂದ ವಾಡಿವರೆಗೆ 03 ಸುತ್ತುವಳಗಳ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |

ಮುಖ್ಯ ಸಂಚಾರ ವ್ಯವಸ್ಥಾಪಕರು